

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಆರ್ಥಿಕ ಬಡತನ *v/s* ಆಧ್ಯಾತ್ಮಿಕ ಬಡತನ

ಪ್ರಪಂಚದಲ್ಲಿರುವ ದೇಶಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: 1) ಮುಂದುವರಿದ ರಾಷ್ಟ್ರಗಳು, 2) ಮುಂದುವರಿಯುತ್ತಿರುವ ರಾಷ್ಟ್ರಗಳು ಮತ್ತು 3) ಹಿಂದುಳಿದ ರಾಷ್ಟ್ರಗಳು. ಆಯಾಯ ದೇಶದ ಆರ್ಥಿಕ ಮುನ್ನಡೆಯನ್ನು ಗಮನದಲ್ಲಿರಿಸಿಕೊಂಡು ಹೀಗೆ ವಿಭಾಗ ಮಾಡಲಾಗಿದೆ. ಅದರಲ್ಲಿಯೂ ಮುಂದುವರಿದ ರಾಷ್ಟ್ರಗಳನ್ನು ಅತ್ಯುತ್ತಮ (very high), ಉತ್ತಮ (high) ಮತ್ತು ಮಧ್ಯಮ (medium) ಎಂದು ಮತ್ತೆ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಈ ದೃಷ್ಟಿಯಿಂದ ಇಂದು ವಿಶ್ವದಲ್ಲಿ ಅತ್ಯುತ್ತಮವಾದ ಮುಂದುವರಿದ ರಾಷ್ಟ್ರಗಳೆಂದರೆ ಅಮೇರಿಕಾ, ರಷ್ಯಾ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತಿತರ ಐರೋಪ್ಯ ದೇಶಗಳು. ನಮ್ಮ ದೇಶ ಅಭಿವೃದ್ಧಿಶೀಲ ದೇಶ. ಆಫ್ರಿಕಾ ಖಂಡದಲ್ಲಿರುವ ಅನೇಕ ದೇಶಗಳು ಹಿಂದುಳಿದ ದೇಶಗಳು. ಆದರೆ ಹೀಗೆ ಒಂದು ದೇಶವನ್ನು ಮುಂದುವರಿದ ಅಥವಾ ಹಿಂದುಳಿದ ದೇಶವೆಂದು ನಿರ್ಧರಿಸಲು ಆರ್ಥಿಕ ಮಾನದಂಡವನ್ನು ಅನುಸರಿಸುವುದು ಸರಿಯೇ ಎಂಬ ಬಗ್ಗೆ ವಾದ-ವಿವಾದಗಳಿವೆ. ಇಂತಹ ಶಬ್ದಗಳು ಆರ್ಥಿಕ ದೃಷ್ಟಿಯಿಂದ ಸಾರ್ವತ್ರಿಕವಾಗಿ ಬಳಕೆಯಲ್ಲಿದ್ದರೂ ಇದೊಂದರಿಂದಲೇ ಯಾವುದೇ ದೇಶವನ್ನು ಮುಂದುವರಿದ ರಾಷ್ಟ್ರವೆಂದು ಪರಿಗಣಿಸಲು ಸಾಧ್ಯವಿಲ್ಲ.

ಮುಂದುವರಿದ ರಾಷ್ಟ್ರಗಳಲ್ಲಿರುವ ಪ್ರಜೆಗಳ ಜೀವನಮಟ್ಟ ಮೇಲುದರ್ಜೆಯಿಂದ ಕೂಡಿದೆಯೆಂದು ಹೇಳಿದರೂ ನೆಮ್ಮದಿಯಿಂದ ಕೂಡಿದೆಯೆಂದು ಹೇಳಲು ಬರುವುದಿಲ್ಲ. "India is a rich country inhabited by poor people" (ಭಾರತ ಶ್ರೀಮಂತ ರಾಷ್ಟ್ರ, ಇಲ್ಲಿರುವ ಜನರು ಮಾತ್ರ ಬಡವರು) ಎಂಬ ಮಾತನ್ನು ನೀವು ಕೇಳಿರಬಹುದು. ನಮ್ಮ ದೇಶದ ಪ್ರಾಕೃತಿಕ ಸಂಪತ್ತು ಇತರೆ ದೇಶಗಳಲ್ಲಿಲ್ಲ. ಆದರೆ ಅದು ಕೆಲವೇ ಜನರ ಸ್ವತ್ತಾಗಿದೆ. ಸಮಾನತೆಯ ತತ್ವವನ್ನು ನಮ್ಮ ಸಂವಿಧಾನ ಎಷ್ಟೇ ಪ್ರತಿಪಾದಿಸಿದರೂ ಈ ದೇಶದ ಬಹುಪಾಲು ಜನರು ಅದರಿಂದ ವಂಚಿತರಾಗಿದ್ದಾರೆ. ಈ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಗಮನದಲ್ಲಿರಿಸಿಕೊಂಡು ಹೇಳಿದ ಮೇಲಿನ ಮಾತು ಸರಿಯಾಗಿಯೇ ಇದೆ. ಆದರೆ ಪ್ರಾಕೃತಿಕ ಸಂಪತ್ತಿಗಿಂತ ಮಿಗಿಲಾದ ಆಧ್ಯಾತ್ಮಿಕ ಸಂಪತ್ತು ನಮ್ಮ ದೇಶದಲ್ಲಿದೆ. ಈ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಜಗತ್ತಿನಲ್ಲಿಯೇ ಅತ್ಯಂತ ಮುಂದುವರಿದ ದೇಶವೆಂದರೆ ಭಾರತವೆಂದು ನಿಃಸಂಶಯವಾಗಿ ಹೇಳಬಹುದು. ಸಹಸ್ರಾರು ವರ್ಷಗಳಿಂದ ಈ ದೇಶದಲ್ಲಿ ನಡೆದಿರುವ ಆಧ್ಯಾತ್ಮಿಕ ಚಿಂತನೆ ಅಗಾಧ ಮತ್ತು ಅವರ್ಣನೀಯ. ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರಿದ ಈ ಕಾಲದಲ್ಲಿ 'ವಿಶ್ವವೇ ಒಂದು ಹಳ್ಳಿ' (global village) ಎಂದು ಹೇಳುವ ಮಾತು "ವಿಶ್ವವೇ ಒಂದು ಕುಟುಂಬ" (ವಸುಧೈವ ಕುಟುಂಬಕಮ್) ಎಂದು ಹೇಳಿದ ಪ್ರಾಚೀನ ಋಷಿಮುನಿಗಳ ಮಾತಿಗೆ ಸರಿಸಾಟಿಯಾಗಲು ಸಾಧ್ಯವಿಲ್ಲ. ಅದರಂತೆ ನಮ್ಮ ನಾಡಿನ ಜನ ಬದುಕುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಸಿಗಬಹುದಾದ ಉತ್ತರ ಮಾತ್ರ ನಿರಾಶಾದಾಯಕ. ಆದರೂ ಪಾಶ್ಚಾತ್ಯರ ಜೀವನ ಶೈಲಿಗೆ ಹೋಲಿಸಿದರೆ ಸಮಾಧಾನಕರ.

ನಗರದ ಶ್ರೀಮಂತ ತಂದೆಯೊಬ್ಬ ತನ್ನ ಮಗನಿಗೆ ಬಡಜನರು ಹೇಗೆ ಜೀವಿಸುತ್ತಿದ್ದಾರೆಂದು ತೋರಿಸಲು ಹಳ್ಳಿಯೊಂದಕ್ಕೆ ಕರೆದುಕೊಂಡು ಹೋದ. ಅಲ್ಲಿ ಒಂದೆರಡು ದಿನ ವಾಸವಾಗಿದ್ದು ವಾಪಾಸು ಬಂದ ಮೇಲೆ ಹಳ್ಳಿಯ ಜೀವನಾನುಭವದ ಬಗ್ಗೆ ತನ್ನ ಮಗನನ್ನು ಕೇಳಿದ.

ತಂದೆ: ಪ್ರವಾಸ ಹೇಗಿತ್ತು?

ಮಗ: ತುಂಬಾ ಚೆನ್ನಾಗಿತ್ತು.

ತಂದೆ: ಹಳ್ಳಿಯಲ್ಲಿ ಬಡಜನರು ಹೇಗೆ ಕಷ್ಟದಲ್ಲಿ ಜೀವಿಸುತ್ತಿದ್ದಾರೆಂದು ನೋಡಿದೆಯಾ?

ಮಗ: ಹೌದು, ನೋಡಿದೆ.

ತಂದೆ: ಅವರನ್ನು ನೋಡಿ ಏನು ಕಲಿತೆ?

ಮಗ: ನಮ್ಮ ಮನೆಯಲ್ಲಿ ಒಂದೇ ಒಂದು ನಾಯಿ ಇದೆ. ಅವರ ಮನೆಯಲ್ಲಿ ನಾಲ್ಕು ನಾಯಿಗಳು ಇದ್ದವು. ನಮ್ಮ ಮನೆಯಲ್ಲಿ ಬೆಳಗಿನ ಕಾಫಿಗೆ ಹಾಲು ಡೈರಿಯಿಂದ ಬರುತ್ತದೆ. ಅವರ ಮನೆಯಲ್ಲಿ ಅವರೇ ಸಾಕಿದ ಹಸುಗಳಿಂದ ಬರುತ್ತದೆ. ನಮ್ಮ ಮನೆಯಲ್ಲಿರುವ ಈಜುಕೊಳ ಬಹಳ ಚಿಕ್ಕದು. ಅವರ ಮನೆಯ ಮುಂದೆ ಇದ್ದ ಕೆರೆ ಬಹಳ ದೊಡ್ಡದು. ನಮ್ಮ ಮನೆಯೊಳಗೆ ರಾತ್ರಿ ವಿದ್ಯುದ್ದೀಪಗಳು ಉರಿಯುತ್ತವೆ. ಅವರ ಮನೆಯ ಅಂಗಳದಲ್ಲಿ ಮೇಲೆ ತಾರೆಗಳು ಜಗಮಗಿಸುತ್ತವೆ. ನಾವು ವಾಸಿಸುವ ಮನೆಯ ಸುತ್ತ ಇರುವ ಜಾಗ ಅತ್ಯಲ್ಪ. ಅವರ ಮನೆಯ ಸುತ್ತ ಇದ್ದ ಜಮೀನು ಕಣ್ಣಿಗೆ ನಿಲುಕದಷ್ಟು. ನಾವು ನಮಗೆ ಬೇಕಾದ ಆಹಾರಪದಾರ್ಥಗಳನ್ನು ಮಾರುಕಟ್ಟೆಯಲ್ಲಿ ಕೊಂಡು ತರುತ್ತೇವೆ. ಅವರು ತಮಗೆ ಬೇಕಾದುದನ್ನು ತಾವೇ ಬೆಳೆದುಕೊಳ್ಳುತ್ತಾರೆ, ಬೇರೆಯವರಿಗೂ ಕೊಡುತ್ತಾರೆ. ನಮ್ಮ ಮನೆಯ ಸುತ್ತ ರಕ್ಷಣೆಗೆ ಕಾಂಪೌಂಡ್ ಗೋಡೆ ಇದೆ. ಅವರ ರಕ್ಷಣೆಗೆ ಅನೇಕ ಬಂಧುಮಿತ್ರರು ಇದ್ದಾರೆ.

ಮಗ ಕೊಟ್ಟ ಉತ್ತರ ತಂದೆಯನ್ನು ತಬ್ಬಿಬ್ಬಾಗಿಸಿತು. ಮಗ ಮುಂದುವರೆದು ಮತ್ತೊಂದು ಮಾತನ್ನು ಹೇಳಿದ: "ಅಪ್ಪಾ! ಆ ಹಳ್ಳಿಯ ರೈತರಿಗಿಂತ ನಾವೆಷ್ಟು ಬಡವರಿದ್ದೇವೆಂದು ನನಗೆ ಈಗ ಅರ್ಥವಾಗುತ್ತಿದೆ!"

"It is easier for a camel to go through the eye of a needle than the rich man to enter the Kingdom of God" (ಸೂಜಿಯ ಒಂದು ಸಣ್ಣ ರಂಧ್ರದಲ್ಲಿ ಒಂಟೆಯಾದರೂ ಹೋಗಬಹುದು, ಧನಿಕನಾದವನು ದೇವರ ರಾಜ್ಯದಲ್ಲಿ ಪ್ರವೇಶ ಪಡೆಯಲು ಸಾಧ್ಯವಿಲ್ಲ) ಎಂದು ಹೇಳಿದ ಏಸುಕ್ರಿಸ್ತನ ಮಾತು ನೆನಪಾಗುತ್ತದೆ. ಧನಿಕರು ದೇವರ ಸಾನ್ನಿಧ್ಯಕ್ಕೆ ಹೋಗಲು ಸಾಧ್ಯವಿಲ್ಲವೆಂದಲ್ಲ. ದೇವರು ಮೆಚ್ಚುವುದು ಭಕ್ತನ ಭೌತಿಕ ಸಂಪತ್ತನ್ನಲ್ಲ, ಭಕ್ತಿಯ ಸಂಪನ್ನತೆಯನ್ನು. ಅಂತಹ ಆಧ್ಯಾತ್ಮಿಕ ಬಡತನದ (spiritual poverty) ಅರಿವು ಮತ್ತು ತೊಳಲಾಟ ಅವನಿಗೆ ಇರಬೇಕು. "Blessed are the poor in spirit, for their's is the Kingdom of Heaven!" ಎಂದು ಏಸುಕ್ರಿಸ್ತ ಹೇಳಿದ್ದಾಗಲೀ, "ಭಕ್ತಿಯಿಲ್ಲದ ಬಡವ ನಾನಯ್ಯಾ, ಕಕ್ಕಯ್ಯನ ಮನೆಯಲೂ ಬೇಡಿದೆ, ಚೆನ್ನಯ್ಯನ ಮನೆಯಲೂ ಬೇಡಿದೆ, ಎಲ್ಲ ಪುರಾತನರು ಸೇರಿ ಭಕ್ತಿ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ!" ಎಂದು ಬಸವಣ್ಣನವರು ಹೇಳಿದ್ದಾಗಲೀ ಈ ಅರ್ಥದಲ್ಲಿ. ಆರ್ಥಿಕ ಬಡತನವನ್ನು ನಿವಾರಿಸಿಕೊಳ್ಳಲು ಮನುಷ್ಯ ಪ್ರಯತ್ನಿಸಿದಂತೆ ಆಧ್ಯಾತ್ಮಿಕ ಬಡತನವನ್ನು ನಿವಾರಿಸಿಕೊಳ್ಳುವ ಪ್ರಯತ್ನವನ್ನೂ ಮಾಡಬೇಕು.

ಆರ್ಥಿಕ ಸಂಪನ್ನತೆ ಮನುಷ್ಯನ ಸುಖಕ್ಕೆ ದಾರಿಯಾಗಬಲ್ಲುದಾದರೂ ಅದೊಂದೇ ಸುಖವನ್ನು ತಂದುಕೊಡಲಾರದು. "ನ ವಿತ್ತೇನ ತರ್ಪಣೀಯೋ ಮನುಷ್ಯಃ" ಎನ್ನುತ್ತದೆ ಕಠೋಪನಿಷತ್. ಅಂದರೆ ಹಣದಿಂದ ಮನುಷ್ಯನನ್ನು ತೃಪ್ತಿಪಡಿಸಲಾಗದು. ಎಷ್ಟಿದ್ದರೂ ಬೇಕೆಂಬ ಹಪಾಹಪಿ ಇದ್ದೇ ಇರುತ್ತದೆ. ಮನುಷ್ಯನ ಸುಖ ಮತ್ತು ನೆಮ್ಮದಿಗೆ ಬೇಕಾಗಿರುವುದು ಇದೆಲ್ಲಕ್ಕೂ ಮಿಗಿಲಾದ ಆಧ್ಯಾತ್ಮಿಕ ಸಂಪನ್ನತೆ. ಸಿರಿ-ಸಂಪತ್ತು ಇಲ್ಲದಿದ್ದರೂ ಸುಖಿಸುವ ಮನಃಸ್ಥಿತಿ. ಸಂಪತ್ತೊಂದೇ ಸುಖವನ್ನು ತಂದುಕೊಡುತ್ತದೆ ಎಂಬುದು ಭ್ರಮೆ. 'ರತ್ನದ ಸಂಕೋಲೆಯಾದರೆ ತೊಡರಲ್ಲವೇ, ಮುತ್ತಿನ ಬಲೆಯಾದರೆ ಬಂಧನವಲ್ಲವೇ?" ಎಂದು ಕೇಳುತ್ತಾಳೆ ಅಕ್ಕಮಹಾದೇವಿ. ಅಂದರೆ ಮುತ್ತುರತ್ನಗಳು ಅತ್ಯಂತ ಬೆಲೆಯುಳ್ಳ ವಸ್ತುಗಳು ನಿಜ. ಅವುಗಳನ್ನು ಪಡೆಯಲು ಎಲ್ಲರೂ ಬಯಸುತ್ತಾರೆ. ಆದರೆ ಅಂತಹ ಬೆಲೆಯುಳ್ಳ ರತ್ನದಿಂದಲೇ ಮಾಡಿದ ಸರಪಳಿಯಿಂದ ನಿಮ್ಮ ಕಾಲನ್ನು ಕಟ್ಟಿಹಾಕಿದರೆ, ಬೆಲೆಬಾಳುವ ಮುತ್ತಿನಿಂದಲೇ ಮಾಡಿದ ಬಲೆಯಲ್ಲಿ ನಿಮ್ಮನ್ನು ಬಂಧಿಸಿ ಜೈಲಿಗೆ ಹಾಕಿದರೆ ನಿಮಗೆ ಸುಖ-ಸಂತೋಷಗಳು ಜೀವನದಲ್ಲಿ ದೊರೆಯಲು ಸಾಧ್ಯವೇ ಎಂಬುದು ಅಕ್ಕನ ವಚನದ ಆಶಯ.

ನಮ್ಮ ದೇಶದ ಧನಿಕರು ಮಹಡಿಯ ಮೇಲೆ ಮಹಡಿಯನ್ನು ಕಟ್ಟುತ್ತಾ ಹೋದರೆ ಕೃಷಿಯನ್ನೇ ಆಧರಿಸಿ ಜೀವನ ನಿರ್ವಹಣೆ ಮಾಡುತ್ತಿರುವ ಹಳ್ಳಿಯ ಬಡರೈತರ ಬದುಕಿನ ಬವಣೆ ಹೇಳತೀರದು. ರೈತರ ಜಮೀನಿನಲ್ಲಿ ಬೆಳೆ ಬೆಳೆಯುತ್ತಿದೆ ಎನ್ನುವುದಕ್ಕಿಂತ ಸಾಲ ಬೆಳೆಯುತ್ತಿದೆ ಎನ್ನುವುದು ಹೆಚ್ಚು ಸೂಕ್ತವಾದೀತು. ರೈತರು ಸಾಲ ಮಾಡಿ ಜಮೀನು ಉಳುಮೆ ಮಾಡುತ್ತಾರೆ, ಬೆಳೆದ ಬೆಳೆಯಿಂದ ಸಾಲ ತೀರಿಸುವುದಿರಲಿ ಸಾಲದ ಬಡ್ಡಿ ಕಟ್ಟಲು ಸಾಧ್ಯವಾಗದೆ ಸಾಯುತ್ತಿದ್ದಾರೆ. ಪೇಟೆ ಪಟ್ಟಣಗಳಲ್ಲಿರುವ ನಾಗರೀಕ ಸೌಲಭ್ಯಗಳು ಹಳ್ಳಿಯ ಜನರಿಗೆ ಸಿಗುತ್ತಿಲ್ಲ. ಸರಕಾರಗಳು ಭರವಸೆಯ ಮಹಾಪೂರವನ್ನೇ ಹರಿಸುತ್ತವೆ. ಅವು ಕಾರ್ಯರೂಪಕ್ಕೆ ಬರುವುದರೊಳಗೆ ಸರಕಾರಗಳು ಬದಲಾಗಿರುತ್ತವೆ. ಮುಂದಿನ ಸರಕಾರ ಹಿಂದಿನ ಸರಕಾರದ ಯೋಜನೆಗಳನ್ನು ಮುಂದುವರಿಸಲು ಆಸಕ್ತಿ ವಹಿಸುವುದಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರದ ದುರಾಸೆಯಿಂದ ಸರಕಾರಗಳನ್ನು ಬೀಳಿಸುವ ಸಂಚು ನಡೆಯುತ್ತಿದೆಯೇ ಹೊರತು ಜನರ ಜೀವನ ಮಟ್ಟ ಸುಧಾರಿಸಬೇಕೆಂಬ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿಲ್ಲ.

ಈಗ ಕರ್ನಾಟಕದಲ್ಲಿ ದಿನನಿತ್ಯವೂ ರಾಜಕೀಯ ಪ್ರಹಸನ ರಂಗೇರುತ್ತಿದೆ. ಶಾಲೆಗಳಲ್ಲಿ ಮಕ್ಕಳು ಆಡುವ musical chair ನಂತೆ ಆಗಿದೆ. ಆದರೆ ಶಾಲಾ ಮಕ್ಕಳಂತೆ ರಾಜಕಾರಣಿಗಳು ಮುಗ್ಧರಲ್ಲ. ಅಧಿಕಾರದಲ್ಲಿರುವವರಿಗೆ ತಮ್ಮ ಅಧಿಕಾರವನ್ನು ಶತಾಯಗತಾಯ ಉಳಿಸಿಕೊಳ್ಳಬೇಕಾಗಿದೆ. ವಿರೋಧಪಕ್ಷಗಳಿಗೆ ಅಧಿಕಾರದಲ್ಲಿರುವವರನ್ನು ಶತಾಯಗತಾಯ ಕೆಳಗಿಳಿಸಬೇಕಾಗಿದೆ. ಇಬ್ಬರದೂ ಒಂದಂಶದ ಕಾರ್ಯಕ್ರಮ. ಒಬ್ಬರದು ಕುರ್ಚಿಯನ್ನು ಭದ್ರವಾಗಿ ಹಿಡಿದುಕೊಳ್ಳುವುದು. ಇನ್ನೊಬ್ಬರದು ಕುರ್ಚಿಯಲ್ಲಿ ಕುಳಿತವರನ್ನು ಬೀಳಿಸಿ ಅದರ ಮೇಲೇರುವುದು; ಅದಕ್ಕಾಗಿ ಯಾವ ಮಾರ್ಗವಾದರೂ ಸರಿ. ಇಬ್ಬರಿಗೂ ಗುರಿಯಷ್ಟೇ ಮುಖ್ಯ. ಅದರ ಸಾಧನೆಗಾಗಿ ಅವರು ಹಿಡಿಯುತ್ತಿರುವ ಮಾರ್ಗ ರಾಜ್ಯಪಾಲರತ್ತ ಹೋಗುವ 'ರುಜು'ಮಾರ್ಗವಾಗಿದೆಯೇ ಹೊರತು, ಜನರತ್ತ ಹೋಗುವ 'ಋಜು'ಮಾರ್ಗವಾಗಿಲ್ಲ. ನಾಡಿನ ಮಠಾಧೀಶರ ಬಳಿ ಆಗಾಗ್ಗೆ ಹೋಗುವ ರಾಜಕಾರಣಿಗಳು 'ರುಜು' ಮತ್ತು 'ಋಜು' ಶಬ್ದಗಳ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿದಂತಿಲ್ಲ. ಗುರಿ ಮತ್ತು ಮಾರ್ಗ (ends and means) ಎರಡೂ ಶುದ್ಧವಾಗಿರಬೇಕು ಎಂಬ ಗಾಂಧೀಜಿ ಮಾತಿನಲ್ಲಿ ಇಬ್ಬರಿಗೂ ನಂಬಿಕೆಯಿಲ್ಲ. ಗಾಂಧಿ ಪ್ರತಿಮೆಯ ಬಳಿ ಕುಳಿತು ಧರಣಿ ನಡೆಸುವುದು ಬೇಕಾಗಿದೆಯೇ ಹೊರತು ಗಾಂಧಿ ತತ್ವ ಬೇಕಿಲ್ಲ. ಜನರ ಮುಂದೆ ಇರುವ ಕಷ್ಟಗಳಿಗೆ ಸ್ಪಂದಿಸಬೇಕಾದವರು ಯಾರು?

ಈಗ ಮಳೆಗಾಲ ಮುಗಿಯುತ್ತಾ ಬಂದಿದೆ. ಬೇಸಿಗೆ ಕಾಲಿಡಲು ಸಿದ್ಧವಾಗುತ್ತಿದೆ. ಅದು ಬಂದ ನಂತರ ವಿದ್ಯುತ್ ಕ್ಷಾಮಕ್ಕೆ ಪರಿಹಾರವೇನು? ಈ ವರ್ಷದ ಮಳೆಗಾಲದಲ್ಲಿ ಸುರಿದ ಕುಂಭದ್ರೋಣ ಮಳೆಯಿಂದಾಗಿ ನಾಡಿನ ಜೀವನಾಡಿಯಂತಿದ್ದ ಅನೇಕ ಕೆರೆಗಳು ಒಡೆದು ಹೋದವು. ದಶಕಗಳಿಂದಲೂ ನೀರಿಲ್ಲದೆ ಬರಿದಾಗಿದ್ದ ಕೆರೆಗಳು ತುಂಬಿ ಕೋಡಿವರಿಯುವಷ್ಟು ನೀರು ಬಂದರೂ ಸಂಗ್ರಹಿಸಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಯಾವ ಪೂರ್ವ ಸಿದ್ಧತೆಯನ್ನೂ ಮಾಡಿಕೊಳ್ಳದೆ ಇರುವುದು. ಮಳೆಗಾಲಕ್ಕೆ ಸಾಕಷ್ಟು ಮೊದಲೇ ಹಿಂದೆ ಒಡೆದ ಕೆರೆಗಳನ್ನು, ದುರ್ಬಲವಾಗಿದ್ದ ಏರಿಗಳನ್ನು ರಿಪೇರಿ ಮಾಡಿ ಇಟ್ಟುಕೊಂಡಿದ್ದರೆ ಎಷ್ಟು ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳಬಹುದಾಗಿತ್ತು. ಇಂಥ ವಿಷಯಗಳ ಕಡೆಗೆ ಲಕ್ಷ್ಯ ಕೊಡಬೇಕಾದವರು ಯಾರು? ರೈತರೇ? ಇಲಾಖೆಯ ಅಧಿಕಾರಿಗಳೇ? ಮಂತ್ರಿಗಳೇ? ಯಾರು? ಕೇವಲ ವಿಪತ್ತು ಸಂಭವಿಸಿದಾಗ ಗಂಜಿ ಕೇಂದ್ರಗಳನ್ನು ವಾರೊಪ್ಪತ್ತು ನಡೆಸಿದರೆ ಅಧಿಕಾರಿಗಳ ಮತ್ತು ಸರಕಾರದ ಕರ್ತವ್ಯ ಮುಗಿಯಿತೇ? ಅಧಿಕಾರಿಯ ನಿರ್ಲಕ್ಷದಿಂದ ಕೆರೆ ಒಡೆಯುವಂತಾದರೆ ಅಂಥವರನ್ನು ಶಿಕ್ಷಿಸುವ ವ್ಯವಸ್ಥೆ ಪ್ರಜಾತಂತ್ರದಲ್ಲಿ ಆಗಬೇಕು. ರಾಜ್ಯದಲ್ಲಿ ಎಷ್ಟು ಕೆರೆಗಳು ಒಡೆದುಹೋಗಿವೆ? ಆ ಕಾರಣಕ್ಕಾಗಿ ಎಷ್ಟು ಜನ ಅಧಿಕಾರಿಗಳಿಗೆ ಶಿಕ್ಷೆಯಾಗಿದೆ? ಪ್ರಜಾಸತ್ತೆಯಲ್ಲಿ ನಿತ್ಯವೂ ಸಾಯುತ್ತಿರುವವರು ಪ್ರಜೆಗಳೇ ಹೊರತು ಅಧಿಕಾರಿಗಳಾಗಲೀ, ರಾಜಕಾರಣಿಗಳಾಗಲೀ ಅಲ್ಲ. ರಾಜಕಾರಣದಲ್ಲಿ 'ಪಾಪಿ ಚಿರಾಯು' ಎಂಬಂತಾಗಿದೆ.

ನಮ್ಮ ಜನರೂ ಅಷ್ಟೆ. 'ನಾವು ಪಡೆದುಕೊಂಡು ಬಂದಿರುವುದೇ ಇಷ್ಟು' ಎಂದು ಸುಮ್ಮನೇ ಇದ್ದುಬಿಡುತ್ತಾರೆ. ಪ್ರತಿದಿನವೂ ದೂರದರ್ಶನದಲ್ಲಿ ಈ ಅತಿರಂಜಿತ, ವರ್ಣರಂಜಿತ ಸುದ್ದಿಗಳನ್ನು ನೋಡಿ ಕೇಳಿ ರೋಸಿಹೋಗಿದ್ದಾರೆ. ಹಳ್ಳಿಯ ಚಹಾದಂಗಡಿಗಳಲ್ಲಿ, ಕ್ಷೌರದಂಗಡಿಗಳಲ್ಲಿ, ಬೇವಿನ ಕಟ್ಟೆಗಳ ಮೇಲೆ, ಗುಡಿಗಳ ಜಗಲಿಯ ಮೇಲೆ ಕುಳಿತು ಕಾಡು ಹರಟೆ ಹೊಡೆದು ಕಾಲವನ್ನು ತಳ್ಳುತ್ತಾರೆ. ಮಾತಿನಲ್ಲಿ ಮಾತ್ರ ತಮ್ಮ ನೋವು, ಸಿಟ್ಟು ಸೆಡವುಗಳನ್ನು ತೋರುತ್ತಾರೆ. ಇದೇ ಜನ ಚುನಾವಣೆ ಬಂತೆಂದರೆ ಸಿಗುವ ಎಂಜಲು ಕಾಸಿಗೆ ಕೈಯೊಡ್ಡುತ್ತಾರೆ, ಪವಿತ್ರವೆಂದು ಹೇಳಲಾಗುವ ತಮ್ಮ ಮತವನ್ನು ಮಾರಿಕೊಳ್ಳುತ್ತಾರೆ.

ವ್ಯಭಿಚಾರದ ಆರೋಪ ಹೊತ್ತಿದ್ದ ಮಹಿಳೆಯೊಬ್ಬಳಿಗೆ ದಾರಿಯಲ್ಲಿ ಕಲ್ಲು ಹೊಡೆದು ಸಾಯಿಸಲು ಮುಂದಾಗಿದ್ದ ಜನರನ್ನು ನೋಡಿದ ಏಸು ಕ್ರಿಸ್ತ "ಯಾವ ಪಾಪವನ್ನೂ ಮಾಡದೇ ಇರುವವರು ಮೊದಲ ಕಲ್ಲು ಎಸೆಯಿರಿ" ಎಂದು ಸವಾಲು ಹಾಕಿದ. ಆಗ ಕಲ್ಲುಗಳನ್ನು ಕೈಗೆತ್ತಿಕೊಂಡಿದ್ದ ಜನ ತಲೆತಗ್ಗಿಸಿ ಹಿಂದೆ ಸರಿದರು. ಅದಕ್ಕೆ ಕಾರಣ ಅವರು ಎಷ್ಟೇ ಪಾಪಕೃತ್ಯಗಳನ್ನು ಮಾಡಿದವರಾಗಿದ್ದರೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆ, ಪಾಪಭೀತಿ ಅವರಲ್ಲಿತ್ತು. ಇಂದು ಅದೇ ಏಸುಕ್ರಿಸ್ತ ಮತ್ತೆ ಜನ್ಮವೆತ್ತಿ ಬಂದು ಅದೇ ಸವಾಲನ್ನು ಹಾಕಿದರೆ ತಲೆತಗ್ಗಿಸುವ ಪ್ರಾಮಾಣಿಕ ಜನ ಸಾರ್ವಜನಿಕ ರಂಗದಲ್ಲಿ ಇಂದು ಇದ್ದಾರೆಯೇ? ತಮ್ಮ ತಪ್ಪಿನ ಅರಿವಿದ್ದರೂ, ತಮ್ಮ ಪಾಪಕೃತ್ಯಗಳನ್ನು ಮುಚ್ಚಿಕೊಂಡು ಬೇರೆಯವರ ಮೇಲೆ ಕಲ್ಲು ಬೀರುವವರೇ ಹೆಚ್ಚಲ್ಲವೇ?

ಸಹೃದಯ ಓದುಗರೇ, ತಮ್ಮ ತಪ್ಪಿನ ಅರಿವಿದ್ದರೂ ಸಾರ್ವಜನಿಕ ಜೀವನದಲ್ಲಿ ತಪ್ಪು ಮಾಡುವ ಮುಖಂಡರನ್ನು ಕ್ಷಮಿಸುವ 'ಔದಾರ್ಯ' ಈ ದೇಶದ ಜನರಿಗೆ ಇದೆಯೆಂದೇ ಅಲ್ಲವೇ ಈ ಎಲ್ಲಾ 'ಸರ್ಕಸ್' ನಡೆಯುತ್ತಿರುವುದು?

24.11.2010

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑